**ದಿನಾಂಕಃ 25-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ Sri. ACD ವಕೀಲರಿಂದಃ</u>**

ನಾನು ಆರೋಪಿಯ ಮೇಲೆ Money recovery ದಾವೆ ಅಸಲು ದಾವಾ ಸಂಖ್ಯೆ 125/2014 ಇದೇ ನ್ಯಾದಲ್ಲಿ ಹಾಕಿರುತ್ತೇನೆಂದರೆ ಸರಿ. ಪ್ರಸ್ತುತ ದಾವೆ ಈಗ ಏನಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ದಾವೆ ಈಗ Dismiss ಆಗಿ ಅದರ ಮೇಲೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ನನಗೆ ನೆನಪಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿ ಕೊಂಡಿದ್ದು ಸದರಿ ದಾಖಲಾತಿಯನ್ನು ನಿಡಿ- 2 ಎಂದು ಗುರುತಿಸಲಾಯಿತು. ಸದರಿ ನಿಡಿ- 2 ಆಡಳಿತ ಮಂಡಳಿಯ 7 ನೇ ಸದಸ್ಯರ ಪೂರ್ಣ ಹೆಸರು ಶಾಂತವೀರಪ್ಪ ಶಿವಯೋಗಪ್ಪ ಪರುಶೆಟ್ಟಿ ಎಂದರೆ ಸರಿ. ಸದರಿ ವ್ಯಕ್ತಿ ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆ ಪರ 11 ನೇ ಇರುತ್ತಾರೆ ಎಂದರೆ ಸರಿಯಲ್ಲ. ಶಾಂತವೀರಪ್ಪ ಶಿವಯೋಗಪ್ಪ ಪರುಶೆಟ್ಟಿ 2003 ರಲ್ಲಿ ನಮ್ಮ ಶಾಲೆಯ ಮುಖ್ಯೋಪಾದ್ಯಾಯರು ಆಗಿದ್ದರು. MOA ಮತ್ತು ಬೈಲಾಸ ಪ್ರಕಾರ ಆಡಳಿತ ಮಂಡಳಿಯ ಸದಸ್ಯರು ಸೊಸಾಯಿಟಿಯಲ್ಲಿ ಯಾವುದೇ ಹುದ್ದೆಯಲ್ಲಿ ಇರಬಾರದು ಎಂದರೆ ಸರಿ. ನನಗೂ ಮತ್ತು ನನ್ನ ಪತಿಗೂ ಶಾಂತವೀರಪ್ಪ ಶಿವಯೋಗಪ್ಪ ಪರುಶೆಟ್ಟಿ ಎನ್ನುವವರ ಮೇಲೆ ವಿಶೇಷವಾದ ಪ್ರೀತಿ ಇರುತ್ತದೆ ಎಂದರೆ ಸರಿಯಲ್ಲ. ಶಾಂತವೀರಪ್ಪ ಶಿವಯೋಗಪ್ಪ ಪರುಶೆಟ್ಟಿ ನಾವು ಹೇಳಿದಂತೆ ಕೇಳುತ್ತಾರೆ ಎಂದರೆ ಸರಿಯಲ್ಲ. ಆರೋಪಿಯನ್ನು 1986 ರಲ್ಲಿ ನಮ್ಮ ಸೊಸಾಯಿಟಿಯ ಶಾಲೆಯ ಪ್ರಿಂಸಿಪಾಲರಾಗಿ ನೇಮಕಗೊಂಡಿರುತ್ತಾರೆ. ಎಲಿಗಾರ ಎಂಬ ವ್ಯಕ್ತಿ ನಿವೃತ್ತಿ ಹೊಂದಿದ ನಂತರ ಶಾಂತವೀರಪ್ಪ ಶಿವಯೋಗಪ್ಪ ಪರುಶೆಟ್ಟಿ ಇವರನ್ನು ನಮ್ಮ ಶಾಲೆಯ ಮುಖ್ಯೋಪಾದ್ಯಾಯರನ್ನಾಗಿ ನೇಮಕ ಮಾಡಿರುತ್ತೇವೆ. ಸೇವಾ ಹಿರಿಯತನದ ಆಧಾರದ ಮೇಲೆ ಆರೋಪಿಯನ್ನು ಶಾಲೆಯ ಮುಖ್ಯೋಪಾದ್ಯಾಯರನ್ನಾಗಿ ಮಾಡಬೇಕಾಗಿತ್ತು, ಆದರೆ ಶಾಂತವೀರಪ್ಪ ಶಿವಯೋಗಪ್ಪ ಪರುಶೆಟ್ಟಿ ಇವರ ಮೇಲಿರುವ ವಿಶೇಷ ಪ್ರೀತಿಯಿಂದ ಪರುಶೆಟ್ಟಿ ಇವರನ್ನು ಮುಖ್ಯೋಪಾದ್ಯಾಯರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನ್ಯಾ ದ ಮುಂದಿರುವ ಆರೋಪಿ ಕೆಎಟಿ ಗೆ ಮೇಲ್ಮನವಿ ಮಾಡಿ ನಾವು ಪರುಶೆಟ್ಟಿ ಅವರನ್ನು ಮುಖ್ಯೋಪಾದ್ಯಾಯರನ್ನಾಗಿ ಮಾಡಿದ ಆದೇಶವನ್ನು ಪ್ರಶ್ನಿಸಿ ತನ್ನನ್ನು ಮುಖ್ಯೋಪಾದ್ಯಾಯರನ್ನಾಗಿ

ಮಾಡಬೇಕು ಎಂಬ ಆದೇಶ ತಂದು ನಮ್ಮ ಮುಂದೆ ಹಾಜರುಪಡಿಸಿದ್ದು ಆಗ ಆರೋಪಿಯನ್ನು ಪರುಶೆಟ್ಟಿ ಅವರ ಬದಲಿಗೆ ಮುಖ್ಯೋಪಾದ್ಯಾಯರನ್ನಾಗಿ ಮಾಡಿರುತ್ತೇವೆಂದರೆ ಸರಿ. ಈ ಹಿನ್ನೆಲೆಯಲ್ಲಿ ನನಗೆ ಮತ್ತು ನನ್ನ ಪತಿಗೆ ಆರೋಪಿಯ ಮೇಲೆ ವೈಯಕ್ತಿಕ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಚೇರಮನ್ ಹುದ್ದೆಯಲ್ಲಿರುವವರು ಸಂಸ್ಥೆಯಲ್ಲಿ ಪ್ರತಿ ತಿಂಗಳಿಗೊಮ್ಮೆ ಮೀಟಿಂಗ್ ಮಾಡುತ್ತಾರೆ. ನಮ್ಮ ಸಂಸ್ಥೆಯಲ್ಲಿ 4 ಮೀಟಿಂಗ ಮಾಡಿರುತ್ತೇವೆ. 2004 ಮತ್ತು 2005 ರಲ್ಲಿ ಎಷ್ಟು ಮೀಟಿಂಗ್ ಮಾಡಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. 2006 ರಿಂದ 2008 ರವರೆಗೆ ಎಷ್ಟು ಮೀಟಿಂಗ್ ಮಾಡಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. 2003 ರಲ್ಲಿ ಮಾಡಿದ ಪ್ರತಿ ತಿಂಗಳ ಮೀಟಿಂಗನಲ್ಲಿ ಲೆಕ್ಕಪತ್ರಗಳನ್ನು ನಾವು ಪರಿಶೀಲಿಸಿರುತ್ತೇವೆ. 2003 ರಿಂದ 2008 ರ ವರೆಗಿನ ಅವಧಿಯ ಲೆಕ್ಕಪತ್ರಗಳ ಪರಿಶೀಲನೆಯಲ್ಲಿ ಹಣಕಾಸಿನ ಅವ್ಯವಹಾರ ಆಗಿರುವ ಬಗ್ಗೆ ನಮಗೆ 2005 ರಲ್ಲಿ ತಿಳಿದುಬಂದಿರುತ್ತದೆ. 2003 ರಿಂದ 2008 ರ ವರೆಗಿನ ಅವಧಿಯ ಲೆಕ್ಕಪತ್ರಗಳ ಪರಿಶೀಲನೆಯಲ್ಲಿ ಹಣಕಾಸಿನ ಅವ್ಯವಹಾರ ಆಗಿರುವ ಬಗ್ಗೆ ನಿಮಗೆ 2005 ರಲ್ಲಿ ಹೇಗೆ ತಿಳಿದುಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. 2008 ರಲ್ಲಿ ಆದ ಅವ್ಯವಹಾರ 2005 ರಲ್ಲಿ ಗೊತ್ತಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2003-2004, 2004-05, 05-06 ವರೆಗಿನ ನಮ್ಮ ಸಂಸ್ಥೆಯ ಪಿಜಿ ಗಾಳಿ ಅಂಡ ಕಂಪನಿಯವರು ಆಡಿಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ನಮ್ಮ ಸಂಸ್ಥೆಯ 2003-2004, 2004-05, 05-06 ವರೆಗಿನ ಆಡಿಟ್ ರಿಪೋರ್ಟನ್ನು ಪಿಜಿ ಗಾಳಿ ಅಂಡ ಕಂಪನಿಯವರು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಮಾಹಿತಿ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.